**ಶ್ರೀ ಪ್ರಾಣೇಶದಾಸರು (ಲಿಂಗಸುಗೂರು)**

**ಪ್ರಾಣಪತಿ ಪದದ್ವಂದ್ವ ಪಂಕಜಾಸಕ್ತಮಾನಸಂ ।**
**ಶಮಾದಿಗುಣ ಸಂಯುಕ್ತಂ ಶ್ರೀಪ್ರಾಣೇಶ ಗುರುಂ ಭಜೇ ॥**

**ಜನ್ಮ ಸ್ಥಳ – ಲಿಂಗಸುಗೂರು**

**ಜನ್ಮನಾಮ – ಯೋಗೇಂದ್ರ (ಮೂರನೇ ಮಗ)**

**ಗುರುಗಳು – ರೊಟ್ಟಿವರದಾಚಾರ್ಯರು**
**ಜಗನ್ನಾಥದಾಸರು**

ರಾ ಗ – ಮೋ ಹ ನ : ತಾ ಳ – ಆ ದಿ ತಾ ಳ

ತಿಳಿಯೆನು ಎಂದೆಂದಿಗನ್ಯ – ರಂಗ
ಒಲಿದ ದಾಸರು ಜಗನ್ಮಾನ್ಯ ।ಪ।

ಅಲವ ಮಹಾತ್ಮರೆಂಬ ಪುಣ್ಯ – ಕೀರ್ತಿ–
ಗಳ ಕೇಳ್ವನವ ಧನ್ಯ ।ಅ ಪ।

ಹಿರಣ್ಯಕಶಿಪುಜ ಸಹ್ಲಾದನೇ
ಎರಡನೆಯ ಜನ್ಮದಿ ಶಲ್ಯನಾದ
ಗುರು ವಾದಿರಾಜರನರ್ಚಿಸಿದ ಪುರಂ
ದರದಾಸರಾಯರಲ್ಲುದಿಸಿದ ।೧।

ಐದನೆಯ ರೂಪವೀಗಿದಂತೆ – ಬ
ಹುದು ಏಳುಜನ್ಮ ಮುಂದಂತೆ
ಮೋದಾಭಿವೃದ್ಧಿಗೇನೋ ಅಂತೆ – ಎಂಬ

ವಾದಿಗಿದೆಲ್ಲ ಅಂತೆ ಕಂತೆ ।೨।

ದಾಸಕೂಟಸ್ಥರಿಗೀ ಮಾತು – ಕೆಲವು
ದೇಶಗಳಲ್ಲಿ ಅನುಭವವಾಯ್ತು
ಈಸು ಕಥಾಲಾಪವಲ್ಲಾಯಿತು –
ಶ್ರೀ ಪ್ರಾಣೇಶವಿಟ್ಠಲನಲ್ಲಿಹನಾತು ।೩।

---

ರಾಗ – ನಾದನಾಮಕ್ರಿಯೆ : ತಾಳ – ಆದಿತಾಳ

ಪಾಹಿ ಪಾಹಿ ಗುರು ಮೋಹನರಾಯ ।ಪ।

ಪಾಹಿ ಪಾಹಿ ಗುರು ಮೋಹನ ಸಿಂಧುರ
ವಾಹನ ಪದಪಂಕೇರುಹಭೃಂಗ ।ಅಪ।

ನವವಿಧ ಭಕುತಿಗಳೆಂಬೊ ಸರಪಳಿಯೊಳು
ನವನವ ರೂಪದಿ ನಲಿವ ಸುಧೀರ ।೧।

ಪದುಮನಾಭನ ಧ್ಯಾನದ ಮದವೇರಿ
ಪದೆಪದೆಗೆ ಹರಿಪದವಗಾವಾ ।೨।

ವಿಜಯದಾಸರ ಪದರಜವ ಧರಿಸಿ ವೀ
ರಜಪ್ರಾಣೇಶವಿಟ್ಠಲನ ಭಜಿಸಿ ।೩।

## ರಾಗ – ಭೈರವಿ : ತಾಳ – ಅಟತಾಳ

ಹಿಂದಿನ ಸುಕರ್ಮವೇಸು ಬಂದೊದಗಿದವೊ ವರ
ದೇಂದ್ರರಾಯ ಬಂದ ನಮ್ಮ ಮಂದಿರಕಿಂದು ।ಪ।

ಮುತ್ತಿನ ಅಂದಣದೊಳು ಸತ್ತಿಗೆ ನೆರಳಲಿ ಪ್ರ
ಶಸ್ತವಾಗಿ ವೇದಶಾಸ್ತ್ರ ಒತ್ತಿ ಓದುವ
ಉತ್ತಮ ಬುಧರ ಕೂಡ ಭೃತ್ಯರ ಸಂಗಡ ಬಹು
ಹತ್ತೆಂಟು ಬಿರುದಾವಳಿಯುಕ್ತ ಬಂದರು ।೧।

ತಂಡ ತಂಡದಿ ಜನರು ಹಿಂಡುಗೂಡಿ ಫಲಗಳ
ಕೊಂಡು ಬಂದು ಮಾಡುವರು ದಂಡ ಪ್ರಣಾಮ
ಪಂಡಿತಾಗ್ರಗಣ್ಯರು ಭೂಮಂಡಲದೊಳಗಾಗ ಶ್ರಿಯ
ಖಂಡಲನಂತೆ ತೋರ್ಪ ಕಮಂಡಲುಧರ ।೨।

ಶ್ರೀಕರ ಪ್ರಾಣೇಶನೇಕಾಂತದಿ ಒಲಿಸುವಲ್ಲಿ
ಈ ಕುಂಭಿಣಿಯೊಳಗೀತಗೆ ಸರಿ ಕಾಣೆ ನೋಡ
ನೀ ಕಾಯ ಬೇಕೆಂದವರ ಶೋಕವ ಪರಿಹರಿಸಿ
ಜೋಕೆ ಮಾಡುವ ನಿತ್ಯ ದೇಶಿಕ ಕುಲಪತಿ ।೩।

---

## ರಾಗ – ಶಂಕರಾಭರಣ : ತಾಳ – ಅಟತಾಳ

ರಕ್ಷಿಸೆನ್ನನು ದಯಾಂಬುಧೇ ರಕ್ಷಿಸೆನ್ನನು ।ಪ।

ರಕ್ಷಿಸೆನ್ನ ಪಾಪ ಶಿಕ್ಷಿಸಿ ಕರುಣದಿ

ಪಕ್ಷಿವಾಹನಪ್ರಿಯ ಅಕ್ಷೋಭ್ಯಮುನಿಪ । ಅ ಪ ।

ಅನುಮಾನವಿಲ್ಲದೆ ಮಣಿದೆ ತವಾಂಘ್ರಿಗೆ
ಅನಘ ಶ್ರೀಮಾಧವಮುನಿಕರಜಾತ । ೧ ।

ಜಯಮುನಿವಂದಿತ ಜಯವಂತ ನೀನೆ
ದಯಮಾಡು ದುಃಖ ಬಯಲಾಗಲರಿಯೆ । ೨ ।

ಪ್ರಾಣೇಶವಿಟ್ಠಲನ ಧ್ಯಾನದೊಳಗೆ ಮನ
ತಾನಿರುವಂದದಿ ಪೋಣಿಸು ಜವದಿ । ೩ ।

ರಾ ಗ – ಸೌ ರಾ ಷ್ಟ್ರ : ತಾ ಳ – ಏ ಕ ತಾ ಳ

ನೋಡಿದೆ ನಾ ಧನ್ಯನಿಂದಿಗೆ
ನೋಡಿದೆ ಗುರುಮಾಧವತೀರ್ಥರ ವೃಂದಾವನವನ್ನು । ಪ ।

ಗಂಗೆಗೇನು ಪ್ರಯೋಜನವಿಳೆಯೊಳಗೆ ಬಾಹದಕೆ
ಪಿಂಗಳಗೇನು ಜ್ಞಾನಿಗಳಿಗೇನು

ತುಂಗಮಹಿಮೆಯಿಂದ ಅಜ್ಞ ಜನರ ಪಾಪ
ಹಿಂಗಿಸಬೇಕೆಂಬುದಲ್ಲದೆ ಮನವೆ । ೧ ।

ನರಹರಿಗುರುಸುತ ವರದ ಅಕ್ಷೋಭ್ಯಮುನಿ
ಕರಪೂಜಿತ ಅರವಿಂದನಾಭರಲ್ಲಿ
ಧರಾಧರಜತೀರದಿ ಸತ್ಯಮುನಿಗಳಿಂದ
ನಿರುತಾರಾಧನೆಕೊಳುತಿರ್ಪರು, ಮನವೆ । ೨ ।

ಏನ ಇವರ, ಬಣ್ಣಿಸಲು ಎನ್ನಿಂದೊಶವಲ್ಲ
ಆನತ ಜನರಿಗೆ ಕರುಣಿಸಿ
ಪ್ರಾಣೇಶವಿಟ್ಠಲನ ಧಾಮ ತೋರಿಸುವರು
ಕ್ಷೋಣಿಯೊಳಗಪ್ರತಿಮ ಮಹಿಮರು ।೩।

---

## ರಾಗ – ಸೌರಾಷ್ಟ್ರ : ತಾಳ – ಆದಿತಾಳ

ಆನಂದ ತೀರ್ಥರೆಂಬೊ ಅರ್ಥಿಯ ಪೆಸರುಳ್ಳ ।
ಗುರು ಮಧ್ವಮುನಿರಾಯ ।ಪ।

ಏನೆಂಬೆ ನಾನಿಮ್ಮ ಕರುಣಕ್ಕೆ ಎಣೆಗಾಣೆ
ಗುರು ಮಧ್ವಮುನಿರಾಯ ।ಅ ಪ।

ಬೇಸರದೆ ಸರ್ವರೊಳು ಶ್ವಾಸಜಪಂಗಳ ಮಾಡಿ
ಗುರು ಮಧ್ವಮುನಿರಾಯ
ಶ್ರೀಶಗರ್ಪಿಸುತ ನಿನ್ನ ದಾಸರನು ಸಲಹಿದಿ
ಗುರು ಮಧ್ವಮುನಿರಾಯ ।೧।

ಅಂದು ಹನುಮಂತನಾಗಿ ಬಂದು ಸುಗ್ರೀವಗೆ
ಗುರು ಮಧ್ವಮುನಿರಾಯ
ಅಂದವಾದ ಪದವಿತ್ತಾನಂದದಿಂದ ಪೊರೆದೆಯೊ
ಗುರು ಮಧ್ವಮುನಿರಾಯ ।೨।

ಕುಂತಿಯ ಕುಮಾರನಾಗಿ ಹೊಂತ ಕೌರವರ ಕೊಂದೆ
ಗುರು ಮಧ್ವಮುನಿರಾಯ

ಅನಂತ ಪುಣ್ಯವ ಗಳಿಸಿ ಶ್ರೀಕಾಂತನಿಗರ್ಪಿಸಿದೆ
ಗುರು ಮಧ್ವಮುನಿರಾಯ ।೩।

ಅದ್ವೈತರನು ಕಾದು ಗೆದ್ದು ನಿನ್ನ ಭಕ್ತರಿಗೆ
ಗುರು ಮಧ್ವಮುನಿರಾಯ
ಶುದ್ಧ ತಾತ್ಪರ್ಯ ವಾಕ್ಯ ಪದ್ಧತಿಯ ತಿಳಿಸಿದೆ
ಗುರು ಮಧ್ವಮುನಿರಾಯ ।೪।

ಗುರುಪ್ರಾಣೇಶವಿಟ್ಠಲ ಪರನೆಂದು ಡಂಗುರವ
ಗುರು ಮಧ್ವಮುನಿರಾಯ
ಸಾರಿ ಸಜ್ಜನರಿಗೆ ಹರಿಯ ಲೋಕ ತೋರಿಸಿದಿ
ಗುರು ಮಧ್ವಮುನಿರಾಯ ।೫।

---

## ರಾಗ - ನಾಟಿ : ತಾಳ - ಆದಿತಾಳ

ನಮೋ ನಮೋ ಶ್ರೀ ತುಳಸಿ। ಪಾಹಿ ಪಾಹಿ
ಕುಮತಿಯ ಪರಿಹರಿಸಿ ನೀ ।ಪ।

ಅಮಿತಮಹಿಮೆ ಸದ್ಗುಣಗಣಪೂರ್ಣೇ
ಕಮಲೇಕ್ಷಣ ಮಧುಸೂದನನರಸೀ ।ಅ ಪ।

ಅಂದಿನ ಕಾಲದಲಿ ಹರಿಪದ
ವಂದಿಸಿ ಭಕುತಿಯಲೀ
ಅಂದದಿ ವರ ಪಡೆದಿಂದಿಗು ಸರ್ವರ
ಮಂದಿರದೊಳಗಿಹೆ ಪೂಜೆಯ ಕೇಳುತಲಿ ।೧।

ಧನ್ವಂತರಿ ನಯನಾದಿಂದಿಳಿ
ದೊನಜೆ ಜಲಂಧರನಾ ಲ
ಲನೆಯ ಉದ್ಧರಿಸಿದ ಪಾವನತರೆ
ಎನಗಸದಳ ವರ್ಣಿಪೆ ನಿನ್ನ ಗುಣಾ ।೨।

ನಾ ನಂಬಿದೆ ನಿನ್ನ ದೇವತ
ಮಾನಿನಿ ಮಣಿಯನ್ನ
ಹೀನತೆ ಎಣಿಸದೆ ಕರುಣಿಸಿ ಸರ್ವದ
ಪ್ರಾಣೇಶವಿಟ್ಠಲನ ಧ್ಯಾನದೊಳಿರಿಸೆ ।೩।